ಆ) ಹಾಗಿದ್ದಲ್ಲಿ ಹೆಚ್ಚುವರಿ ಕೊರಡಿಗಳನ್ನು ನಿರ್ಮಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ

ಇ) ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದರೊಳಗೆ ಕೊರಡಿಗಳನ್ನು ನಿರ್ಮಿಸಿಕೊಡಲಾಗುವುದೇ?

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) ಅನುದಾನದ ಕೊರತೆಯಿಂದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ

ಇ) ಅನುದಾನದ ಲಭ್ಯತೆಯನ್ನು ಆಧರಿಸಿ ಕೊರಡಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ

ಚಿಕ್ಕನಾಯಕನಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವುದು

203 (164) ಶ್ರೀ ಸುರೇಶ್ ಬಾಬು ಸಿ ಬಿ (ಚಿಕ್ಕನಾಯಕನಹಳ್ಳಿ) ಮಾನ್ಯ ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜ ಶಾಸ್ತ್ರ ಹಾಗೂ ಕನ್ನಡ ಉಪನ್ಯಾಸಕರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಇನ್ನೆಷ್ಟು ದಿನಗಳಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು)

ಅ) ಹೌದು

ಆ) 1 ಚಿಕ್ಕನಾಯಕನಹಳ್ಳಿ ಸರ್ಕಾರಿ ಕಾಲೇಜಿನ ಕನ್ನಡ ವಿಭಾಗದಲ್ಲಿ 8 ಘಂಟೆ ಕಾರ್ಯಭಾರ ಮಾತ್ರ ಇರುತ್ತದೆ ಯುಜಿಸಿ ನಿಯಮಗಳನ್ವಯ 16 ಘಂಟೆ ಕಾರ್ಯಭಾರವಿದ್ದಲ್ಲಿ ಮಾತ್ರ ಒಬ್ಬ ಪೂರ್ಣಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಬೇಕಾಗುತ್ತದೆ ಆದ್ದರಿಂದ 8 ಘಂಟೆ ಕಾರ್ಯಭಾರವನ್ನು ನಿರ್ವಹಿಸಲು ಪ್ರಾಂಶುಪಾಲರ ಹಂತದಲ್ಲಿಯೇ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲು ಅವಕಾಶ ಕಲ್ಪಸಲಾಗಿದೆ

2 ಚಿಕ್ಕನಾಯಕನಹಳ್ಳಿ ಸರ್ಕಾರಿ ಕಾಲೇಜಿನಲ್ಲಿ ಸಮಾಜ ಶಾಸ್ತ್ರ ವಿಷಯವನ್ನು ಪ್ರಸಕ್ತ ವರ್ಷ ಬೋಧಿಸುತ್ತಿಲ್ಲದಿರುವುದರಿಂದ ಉಪನ್ಯಾಸಕರ ನೇಮಕಾತಿ ಅಗತ್ಯವಿರುವುದಿಲ್ಲ

ಅಮೂಲ್ಯ ಕಲಾಕೃತಿಗಳ ದಾಖಲೀಕರಣಕ್ಕಾಗಿ ಕಂಪ್ಯೂಟರೀಕರಣ ಕಾರ್ಯ

205 (155) ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಮೂಲ್ಯ ಕಲಾಕೃತಿಗಳ ಕಲಾವಿದರ, ಸಹಿತಿಗಳ, ಕವಿಗಳನ್ನೊಳಗೊಂಡ ಸಾರಸ್ವತ ಲೋಕದ ವಿವರಗಳ ದಾಖಲೀಕರಣ ಮತ್ತು ಕಂಪ್ಯೂಟರೀಕರಣಕ್ಕಾಗಿ ಸರ್ಕಾರ ಮುಂದಾಗಿದೆಯೇ

ಆ) ಈ ಕಾರ್ಯ ಯೋಜನೆ ಯಾವಾಗಿನಿಂದ ಅನುಷ್ಠಾನಕ್ಕೆ ಬರಲಿದೆ

ಇ) ಇಂತಹವುಗಳ ಸಂರಕ್ಷಣೆಗೆ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಇದಕ್ಕೆ ಬೇಕಾಗುವ ಆರ್ಥಿಕ ನೆರವು ಎಷ್ಟು ಇದನ್ನು ಎಲ್ಲಿಂದ ಪಡೆಯಲು ನಿರ್ಧರಿಸಲಾಗಿದೆ

ಉ) ಇದರಿಂದ ಸಾಂಸ್ಕೃತಿಕ ಲೋಕಕ್ಕೆ ಸಿಗುವ ಪ್ರಯೋಜನಗಳೇನು ವಿವರ ನೀಡುವುದು

ಊ) ಮಂಗಳೂರಿನಲ್ಲಿ ರಂಗಮಂದಿರ ನಿರ್ಮಾಣ ಎಷ್ಟು ವೆಚ್ಚದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು ಇದರಲ್ಲಿ ದಾನಿಗಳ ನೆರವು ಎಷ್ಟು ಸರ್ಕರದ ಸಹಾಯ ಎಷ್ಟು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) .

ಅ) ಹೌದು

ಸುವರ್ಣ ಸಂಸ್ಕೃತಿ ದರ್ಶಿಕೆ (ಕಲ್ಚರಲ್ ಡೈರೆಕ್ಟರಿ) ಎಂಬ ಯೋಜನೆಯ ಮೂಲಕ ಈ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ

ಆ) ಸದರಿ ಕಾರ್ಯಯೋಜನೆಯಡಿ ರಾಜ್ಯದ ಎಲ್ಲ ಕಲಾವಿದರ, ಲೇಖಕರ, ಪ್ರದರ್ಶನಾಂಗಣಗಳ ಕಲಾಸಂಸ್ಥೆಗಳ ಮಾಹಿತಿ ಸಂಗ್ರಹ ಕಾರ್ಯವನ್ನು ದಿನಾಂಕ 1/12/2003 ರಿಂದ ರಾಜ್ಯಾದ್ಯಾಂತ ಆರಂಭಿಸಲಾಗಿದೆ

ಇ) ಸದರಿ ಮಾಹಿತಿಗಳ ಸಂಗ್ರಹವನ್ನು ಪುಸ್ತಕ ಹಾಗೂ ಸಿ ಡಿ ರೂಪದಲ್ಲಿ ಹೊರತಂದ ಅಂತರಜಲತಾಣಕ್ಕೆ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಉದ್ದೇಶಿತ ಕಾರ್ಯಕ್ಕೆ ಸರ್ಕಾರವು ರೂ 50 00 ಲಕ್ಷಗಳ ಹಣಕಾಸು ನೆರವನ್ನು ಒದಗಿಸಿದೆ ಈ ಯೋಜನೆಗೆ ಸುಮಾರು ರೂ 100 ಕೋಟಿ ಬೇಕಾಗುತ್ತದೆ

ಉ) ಈ ಬೃಹತ್ ಯೋಜನೆಯಿಂದ ಇಡೀ ರಾಜ್ಯದ ಸಾಹಿತಿ ಕಲಾವಿದರ / ಸಾಂಸ್ಕೃತಿಕ ಪರ ಸಂಘ ಸಂಸ್ಥೆಗಳ, ಪ್ರದರ್ಶನಾಂಗಣಗಳ ಸಂಪೂರ್ಣ ವಿವರಗಳು ಒಂದೇ ಕಡೆ ಲಭ್ಯವಾಗಲಿದೆ. ಇದರಿಂದ ರಾಜ್ಯದ ಸಾಂಸ್ಕೃತಿಕ ಲೋಕಕ್ಕೆ ಸಂಬಂಧಪಟ್ಟ ಸಮಗ್ರ ಮಾಹಿತಿ ಲಭ್ಯವಾಗಲಿದೆ ಅಲ್ಲದೆ ದೇಶ ವಿದೇಶಗಳಲ್ಲಿರುವ ಕನ್ನಡಿಗರಿಗೂ ವೆಬ್‌ತಾಣದ ಮೂಲಕ ಈ ಮಾಹಿತಿ ದೊರೆಯಲಿದೆ ಪುಸ್ತಕರೂಪದಲ್ಲಿಯೂ ಲಭ್ಯವಾಗುವುದರಿಂದ ರಾಜ್ಯದ ಎಲ್ಲ ಕಲಾಪ್ರೇಮಿಗಳಿಗೆ ಉಪಯೋಗವಾಗಲಿದೆ

ಊ) ಉದ್ದೇಶಿತ ರಂಗಮಂದಿರ ನಿರ್ಮಾಣಕ್ಕೆ ರೂ 3 50 ಕೋಟಿ ವೆಚ್ಚ ಬರಲಿದೆ ಸಾರ್ವಜನಿಕರಿಂದ ರೂ 51 00 ಲಕ್ಷ ವಂತಿಗೆಯನ್ನು ಸಂಗ್ರಹಿಸಲಾಗಿರುತ್ತದೆ ಉದ್ದೇಶಿತ ರಂಗಮಂದಿರ ನಿರ್ಮಾಣ ಕಾರ್ಯಕ್ಕೆ ಸರ್ಕಾರದಿಂದ ಈಗಾಗಲೇ ರೂ 18 00 ಲಕ್ಷಗಳ ಧನ ಸಹಾಯವನ್ನು ನೀಡಲಾಗಿದೆ ಪ್ರಸಕ್ತ ಸಾಲಿನಲ್ಲಿಯೂ ಧನ ಸಹಾಯ ನೀಡಲು ಸರ್ಕಾರಕ್ಕೆ ರೂ 2 00 ಲಕ್ಷಗಳ ಮಂಜೂರು ಮಾಡಲು ಪ್ರಸ್ತಾವನೆ ಬಂದಿದ್ದು, ಪರಿಶೀಲನೆಯಲ್ಲಿದೆ ಸಂಪನ್ಮೂಲದ ಕ್ರೋಢೀಕರಣ ಕಾರ್ಯ ನಡೆದಿದ್ದು, ಕಟ್ಟಡದ ಕೆಲಸಗಳನ್ನು ಸದ್ಯದಲ್ಲೆ ಪ್ರಾರಂಭಿಸಲಾಗುವುದು

ಕ್ಯಾರಿ ಓವರ್ ಪದ್ಧತಿ ಅನುಷ್ಠಾನಗೊಳಿಸುವುದು

206 (156) ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು) ಮಾನ್ಯ ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕ್ಯಾರಿ ಓವರ್ ಪದ್ಧತಿಯು ರಾಜ್ಯದ ಯಾವ ಯಾವ ವಿಶ್ವವಿದ್ಯಾಲಯಗಳಲ್ಲಿ ಜಾರಿಯಲ್ಲಿದೆ

ಆ) ಈ ಕ್ಯಾರಿಓವರ್ ಪದ್ಧತಿಯ ವೈಶಿಷ್ಟಗಳೇನು, ಇದರ ಲೋಪದೋಷಗಳೇನು ವಿವರ ನೀಡುವುದು,

ಇ) ಈ ಕ್ಯಾರಿಓವರ್ ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗಾಗುವ ಪ್ರಯೋಜನಗಳೇನು,

ಈ) ಈ ಪದ್ಧತಿ ಬೇಕೆಂಬ ಬೇಡಿಕ ಮುಂದಿಟ್ಟಿರುವ ವಿಶ್ವವಿದ್ಯಾಲಯ ಯಾವುದು